ಈ ಕಾಲುವೆಯಡಿಯಲ್ಲಿ ಬರುವ ಅಚ್ಚುಕಟ್ಟಿಗೆ (3,725 ಎಕರೆ) ಪರ್ಯಾಯವಾಗಿ ಬಲಭಾಗದ ಮೇಲ್ಮಟ್ಟದ ನಾಲೆಯಿಂದ ಹಾಗೂ ಹೆಬ್ಬಳ ಚೆನ್ನಯ್ಯ ಆಲೆಯ ಸ್ಕವರ್ ಸ್ಲ್ಯೂಯಿಸ್‌ನಿಂದ ನೀರನ್ನು ಪೂರೈಸಿ ಬೆಳೆಗಳು ಹಾನಿಯಾಗದಂತೆ ಕ್ರಮ ಕೈಗೊಳ್ಳಲಾಗಿದೆ.

ಆ) ಒಡೆದುಹೋಗಿದ್ದ ಮೇಲ್ಗಾಲುವೆಯ ಗೋಡೆಗಳನ್ನು ಈಗಾಗಲೇ ದುರಸ್ಥಿಗೊಳಿಸುತ್ತಿದ್ದು, ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರೊದಗಿಸುತ್ತಿರುವುದರಿಂದ ಹೊಸದಾಗಿ ಮೇಲ್ಗಾಲುವೆಯನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸಧ್ಯಕ್ಕೆ ಇರುವುದಿಲ್ಲ.

ಇ) ಹೊಸದಾಗಿ ಮೇಲ್ಗಾಲುವೆಯನ್ನು ನಿರ್ಮಾಣ ಮಾಡುವ ಸಲುವಾಗಿ ಯಾವುದೇ ಅನುದಾನವನ್ನು ನಿಗದಿಪಡಿಸಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಸರ್ವೆ ಕಾರ್ಯ ವಿಳಂಬವಾಗುತ್ತಿರುವುದು

312 (73) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿನ ವ್ಯಾಪ್ತಿಯಲ್ಲಿನ ರೈತರ ಜಮೀನುಗಳ ಸರ್ವೆ ಕಾರ್ಯವು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿಳಂಬಕ್ಕೆ ಕಾರಣಗಳೇನು;

ಇ) ಈ ರೀತಿಯ ವಿಳಂಬಕ್ಕೆ ಕಾರಣರಾಗಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಂಡಿದೆಯೇ, ಹಾಗಿದ್ದಲ್ಲಿ ಕ್ರಮಗಳಾವುವು;

ಈ) ರೈತರ ಜಮೀನಿನ ಸರ್ವೆ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಹೊಸ ಸರ್ವೆಯರ್‌ಗಳನ್ನು ನೇಮಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ ಯಾವಾಗ ನೇಮಿಸಿಕೊಳ್ಳಲಾಗುವುದು?

ಶ್ರೀ ಕರುಣಾಕರ ರೆಡ್ಡಿ (ಕಂದಾಯ ಸಚಿವರು):

ಅ) ಬಂದಿದೆ.

ಆ) ವಿಳಂಬಕ್ಕೆ ಬಹುಮುಖ್ಯ ಕಾರಣಗಳು

1. ಮದ್ದೂರು ತಾಲ್ಲೂಕಿನಲ್ಲಿರುವ ಸರ್ವೆ ಕಾರ್ಯಕ್ಕೆ ಒಟ್ಟು 5083 ಪ್ರಕರಣಗಳು ಬಾಕಿ ಇದ್ದು, ಹಾಲಿಯಿರುವ 8 ಜನ ಸರ್ಕಾರಿ ಭೂಮಾಪಕರು ಮತ್ತು 11 ಜನ ಪರವಾನಗಿ ಭೂಮಾಪಕರುಗಳಿಂದ ಅತಿ ಶೀಘ್ರವಾಗಿ ಇತ್ಯರ್ಥಪಡಿಸಲು ಸಾಧ್ಯವಿಲ್ಲವಾಗಿದೆ.

2. ಸರ್ವೆ ಕಾರ್ಯಕ್ಕೆ ಮುಂಚಿತವಾಗಿ 1356 ಪ್ರಕರಣಗಳ ಪಹಣಿ ತಿದ್ದುಪಡಿ ಕಾರ್ಯವನ್ನು ಸಹ ಕೈಗೊಳ್ಳಬೇಕಾಗಿದ್ದು, ಸದರಿ ಕೆಲಸವನ್ನು ನಿರ್ವಹಿಸಬೇಕಾಗಿರುವುದರಿಂದ ವಿಳಂಬವಾಗಿರುತ್ತದೆ.
3. ಸರ್ಕಾರದ ಆದೇಶ ಪ್ರಕಾರ ಗ್ರಾಮವಾರು ಪೋಡಿ ಪ್ರಕರಣಗಳು ವಿಲೇವಾರಿ ಮಾಡಿ ಪೋಡಿ ರಹಿತ ಗ್ರಾಮ, ತಾಲ್ಲೂಕು ಎಂದು ಘೋಷಿಸುವ ಪೂರ್ವಭಾವಿಯಾಗಿ ಆಯಾ ಗ್ರಾಮಗಳಲ್ಲಿ ಇರುವ ಎಲ್ಲಾ ದರಖಾಸ್ತು ಪೋಡಿ ಪ್ರಕರಣಗಳ ಬಗ್ಗೆ ನಮೂನೆ–1ರಿಂದ 5ರವರೆಗೆ ಭರ್ತಿ ಮಾಡಿ ಅಳತೆ ಕಾರ್ಯ ಕೈಗೊಳ್ಳಬೇಕೆಂಬ ಷರತ್ತಿರುವುದರಿಂದ ಸದರಿ 1 ರಿಂದ 5ರವರೆಗಿನ ನಮೂನೆಗಳನ್ನು ತಯಾರಿಸುವ ಕೆಲಸ ಕಂದಾಯ ಇಲಾಖೆಯಿಂದ ಪೂರ್ಣಗೊಳಿಸದ ಕಾರಣ ಸರ್ವೆ ಕಾರ್ಯ ವಿಳಂಬವಾಗಿರುತ್ತದೆ.

ಇ) ವಿಳಂಬಕ್ಕೆ ಆಡಳಿತಾತ್ಮಕ ಕಾರಣಗಳಿರುವುದರಿಂದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ರೈತರ ಜಮೀನಿನ ಸರ್ವೆ ಕಾರ್ಯವನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಲು ಹೊಸದಾಗಿ 1600 ಜನ ಭೂಮಾಪಕರನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ.

ಉ) ಹೊಸದಾಗಿ 1600 ಜನ ಭೂಮಾಪಕರ ಹುದ್ದೆಗಳನ್ನು ಮಂಜೂರು ಮಾಡಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕರ್ನಾಟಕ ಪರೀಕ್ಷಾ ನಿಯಂತ್ರಣ ಪ್ರಾಧಿಕಾರವನ್ನು ಸಂಪರ್ಕಿಸಲಾಗಿದೆ. ಭೂಮಾಪಕರ ಹುದ್ದೆಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಆಯ್ಕೆ ಪ್ರಕ್ರಿಯೆನ್ನು ಜರೂರಾಗಿ ಪೂರ್ಣಗೊಳಿಸಲಾಗುವುದೆಂದು ಪ್ರಾಧಿಕಾರವು ತಿಳಿಸಿರುತ್ತದೆ.

ಮುತ್ತುರಾಯನ ಕೆರೆ ಪೋಷಕ ನಾಲೆಗಳ ನಿರ್ಮಾಣಕ್ಕೆ ಜಮೀನು ಭೂಸ್ವಾಧೀನಪಡಿಸಿಕೊಳ್ಳುವುದು

313 (635) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ತಾಲ್ಲೂಕಿನ ಆತಗೂರು ಹೋಬಳಿಯ ಹೂತಗೆರೆ ಮತ್ತು ಇತರೆ ಗ್ರಾಮಗಳ ಮತ್ತು ರಾಯನಕೆರೆ ಪೋಷಕನಾಲಾ ನಿರ್ಮಾಣಕ್ಕಾಗಿ ಸರ್ಕಾರ ಎಷ್ಟು ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದೆ; (ವಿವರಗಳನ್ನು ನೀಡುವುದು)